ಓ.ಎಸ್. ನಂ. 48/2023
ಪಿ.ಡಬ್ಲ್ಯೂ- 1

(ಇಂದು ದಿಃ 16-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಮುಂದುವೆರದ ಪಾಟೀ ಸವಾಲು **:- ಶ್ರೀ.SKD** ವಕೀಲರಿಂದ **:-**

ಈ ದಾವೆಯನ್ನು ಸರ್ವೆ ನಂಬರ 272, 3 ಮತ್ತು 407 ಕ್ಕೆ ಸಂಬಂಧ ಪಟ್ಟಂತೆ ಸಲ್ಲಿಸಿದ್ದೇನೆ. ನನ್ನ ತಂದೆಯ ತಾಯಿ ಬಿಚ್ಚಮ್ಮ ಎಂದರೆ ಸರಿ. ನನ್ನ ತಂದೆ ಮತ್ತು ಅವರ ತಾಯಿಗೆ ತೆಲಗಾಂಣ ರಾಜ್ಯದ ವಿಕಾರಬಾದ ಜಿಲ್ಲೆಯ ಬಸಿರಬಾದ ಮಂಡಲನ ಯಕಮ್ಮೈ ಗ್ರಾಮದಲ್ಲಿ 136 ಎಕರೆ ಜಮೀನು ಇತ್ತು. ಸಾಕ್ಷಿಗೆ Land Reforms Tribunal Vikarabad ರವರು ದಿಃ 04-05-1977 ರಂದು ಮಾಡಿದ ಆದೇಶದ ದೃಢಿಕೃತ ನಕಲನ್ನು ತೋರಿಸಲಾಗಿ ಅದರಲ್ಲಿರುವ ಸರ್ವೆ ನಂಬರ ಜಮೀನುಗಳು ನನ್ನ ತಂದೆ ಮತ್ತು ಅವರ ತಾಯಿಗೆ ಸೇರಿದ್ದು ಎಂದು ಹೇಳಿದ್ದು ಸದರಿ ದಾಖಲಾತಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ದಿಃ 31-12-1974 ರಂದು ನಾರಾಯಣರೆಡ್ಡಿ ಸೇಡಂನ ಭೂನ್ಯಾಯಾ ಮಂಡಳಿಯಲ್ಲಿ ಪಾರ್ಮ್ ತುಂಬಿದ್ದರು ಎಂದರೆ ಸರಿ. ಸಾಕ್ಷಿಗೆ Form No. 11 ಗಳನ್ನು ತೋರಿಸಲಾಗಿ ಅವುಗಳನ್ನು ನನ್ನ ತಂದೆ ಸಲ್ಲಿಸಿದ್ದು ಎಂದು ಒಪ್ಪಿಕೊಂಡಿದ್ದು ಅವುಗಳನ್ನು ನಿಡಿ-2 ರಿಂದ 6 ಎಂದು ಗುರುತಿಸಲಾಯಿತು. ಸಾಕ್ಷಿಗೆ ತನ್ನ ತಾಯಿ ಸಲ್ಲಿಸಿದ್ದ Form No.11 ಗಳನ್ನು ತೋರಿಸಲಾಗಿ ಅವುಗಳನ್ನು ನನ್ನ ತಾಯಿ ಸಲ್ಲಿಸಿದ್ದು ಎಂದು ಒಪ್ಪಿಕೊಂಡಿದ್ದು ಅವುಗಳನ್ನು ನಿಡಿ-7 ರಿಂದ 11 ಎಂದು ಗುರುತಿಸಲಾಯಿತು. ಸಾಕ್ಷಿಗೆ 4 Form No.11 ಗಳನ್ನು ತೋರಿಸಲಾಗಿ ಅವು ನನ್ನ ಅಣ್ಣ ಸಲ್ಲಿಸಿದ್ದ Form ಗಳು ಎಂದು ಒಪ್ಪಿಕೊಂಡಿದ್ದು ಅವುಗಳನ್ನು ನಿಡಿ-12 ರಿಂದ 15 ಎಂದು ಗುರುತಿಸಲಾಯಿತು. ಸಾಕ್ಷಿಗೆ 5 Form No.11 ಗಳನ್ನು ತೋರಿಸಲಾಗಿ ಅವು ನನ್ನ ಅಣ್ಣ ಜಗಮೊಹನರೆಡ್ಡಿ ಸಲ್ಲಿಸಿದ್ದ Form ಗಳು ಎಂದು ಒಪ್ಪಿಕೊಂಡಿದ್ದು ಅವುಗಳನ್ನು ನಿಡಿ-16 ರಿಂದ 20 ಎಂದು ಗುರುತಿಸಲಾಯಿತು. ಸಾಕ್ಷಿಗೆ 5 Form No.11 ಗಳನ್ನು ತೋರಿಸಲಾಗಿ ಅವು ನಾನೇ ಸಲ್ಲಿಸಿದ್ದು ಎಂದು ಒಪ್ಪಿಕೊಂಡಿದ್ದು ಅವುಗಳನ್ನು ನಿಡಿ-21 ರಿಂದ 25 ಎಂದು ಗುರುತಿಸಲಾಯಿತು. ನಿಡಿ-2 ರಿಂದ 25 ರಲ್ಲಿ ತೋರಿಸಿರುವ Declaration ಗಳನ್ನು ಭೂನ್ಯಾಯಾ ಮಂಡಳಿಯರವರು ಒಪ್ಪಿಕೊಂಡಿದ್ದಾರೆ ಎಂದರೆ ಸರಿ. ತದನಂತರ ಭೂನ್ಯಾಯ ಮಂಡಳಿಯವರು 1994 ರಲ್ಲಿ ನಮ್ಮ ಕುಟುಂಬದವರಿಗೆ ನೋಟಿಸ ಕೊಟ್ಟಿದ್ದರು ಎಂದರೆ ಸರಿ. ಸದರಿ ನೋಟಿಸನ್ನು ಪ್ರಶ್ನಿಸಿ ನಾವುಗಳು ತಪ್ಪ ಮಾಹಿತಿ ನೀಡಿಲ್ಲ ಎಂದು ಗೌರವಾನ್ವಿತ ಉಚ್ಚ ನ್ಯಾಯಾಲಯದ ಮುಂದೆ WP No. 19696 to 19700/1994 ಸಲ್ಲಿಸಿದ್ದೆವು ಎಂದರೆ ಸರಿ. ಸದರಿ WP ನಲ್ಲಿನ ಆದೇಶ ಪ್ರತಿಯನ್ನು ನಿಡಿ-26 ಎಂದು ಗುರುತಿಸಲಾಯಿತು.

ಯಕಮ್ಮೆಯಲ್ಲಿನ ಆಸ್ತಿಗಳನ್ನು ನಾನು ಮತ್ತು ನನ್ನ ಸಹೋದರರು ವಿಭಾಗ ಮಾಡಿಕೊಂಡಿದ್ದೆವೆ. ಸದರಿ ವಿಭಾಗದಲ್ಲಿ ನಾರಾಯಣರೆಡ್ಡಿಗೆ 34 ಎಕರೆಗೆ, ಸುದರ್ಶನ ರೆಡ್ಡಿಗೆ 37 ಎಕರೆ, ಜಗಮೋಹನರೆಡ್ಡಿಗೆ 37 ಎಕರೆ ಮತ್ತು ನನಗೆ 36 ಎಕರೆ ಭಾಗಕ್ಕೆ ಬಂದಿದೆ. ವಿಭಾಗ ಆದ ದಿನಾಂಕ, ತಿಂಗಳು ಮತ್ತು ವರ್ಷ ಗೊತ್ತಿಲ್ಲ. ಮುಧೋಳದ ಜಮೀನುಗಳು ನಾರಾಯಣರೆಡ್ಡಿ ಕಮಲಮ್ಮ, ನಾನು, ಜಗಮೋಹನರೆಡ್ಡಿ ಮತ್ತು ಸುದರ್ಶನರೆಡ್ಡಿ ರವರ ಹೆಸರಿಗೆ ವಿಭಾಗ ಆಧಾರದ ಮೇಲೆ ದಾಖಲಾಗಿದ್ದವು. ವಿಭಾಗ ಯಾವ ದಿನ, ತಿಂಗಳು ವರ್ಷ ಆಯಿತು ಗೊತ್ತಿಲ್ಲ. ಸದರಿ ವಿಭಾಗ ಸಂಬಂಧ ಪತ್ರ ಆಗಿತ್ತು . ಸದರಿ ಪತ್ರ ನೋಂದಣಿ ಆಗಿರಲಿಲ್ಲ ಸದರಿ ವಿಭಾಗ ಪತ್ರ ಮನೆಯಲ್ಲಿ ನನ್ನ ಬಳಿ ಇದೆ. ಈ ದಾವೆಯಲ್ಲಿ ಸದರಿ ವಿಭಾಗದ ಬಗ್ಗೆ ಹೇಳಿ ಬರೆಸಿಲ್ಲ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಸದರಿ ವಿಭಾಗ ಪತ್ರದಲ್ಲಿ ದಾವಾ ಸ್ವತ್ತುಗಳು ಸುದರ್ಶನ ರೆಡ್ಡಿ, ಜಗಮೋಹನ ರೆಡ್ಡಿ ಮತ್ತು ನನ್ನ ಭಾಗಕ್ಕೆ ಬಂದಿದ್ದವು. ಸರ್ವೆ ನಂಬರ 272 ಸುದರ್ಶನ ರೆಡ್ಡಿ ಭಾಗಕ್ಕೆ, ಸರ್ವೆ ನಂಬರ 3 ಜಗನಮೋಹನ ರೆಡ್ಡಿ ಭಾಗಕ್ಕೆ,ಸರ್ವೆ ನಂಬರ 407 ನನ್ನ ಭಾಗಕ್ಕೆ ಬಂದಿದ್ದವು . ಸರ್ವೆ ನಂಬರ 4, 24 ರ ಜಮೀನು ಜಗನಮೋಹನ ರೆಡ್ಡಿ ಭಾಗಕ್ಕೆ ಹೋಗಿತ್ತು. ಸರ್ವೆ ನಂಬರ 276 ರ ಜಮೀನು ಸುದರ್ಶನ ರೆಡ್ಡಿ ಭಾಗಕ್ಕೆ ಹೋಗಿತ್ತು. ಸರ್ವೆ ನಂಬರ 407 ರ ಜಮೀನು ನನ್ನ ಭಾಗಕ್ಕೆ ಬಂದಿತ್ತು ಎಂದು ತೋರಿಸಲು ಪಹಣಿಗಳನ್ನು ಹಾಜರುಪಡಿಸಿದ್ದೆನೆ.

ಸಾಕ್ಷಿಗೆ ತಹಶೀಲ್ದಾರ ಕಚೇರಿ ಮುಂದೆ ಶ್ರೀಕಾಂತ ರೆಡ್ಡಿ ಸಲ್ಲಿಸಿದ್ದ ಪ್ರಮಾಣ ಪತ್ರ ಮತ್ತು ಅರ್ಜಿಯನ್ನು ತೋರಿಸಲಾಗಿ ಸದರಿ ಪ್ರಮಾಣ ಪತ್ರ ಮತ್ತು ಅರ್ಜಿಯಲ್ಲಿ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಾಗಿ ಹೇಳಿ ಸಾಕ್ಷಿ ತನ್ನ ಸಹಿಗಳನ್ನು ಗುರುತಿಸಿರುತ್ತಾರೆ. ಸಾಕ್ಷಿ ಮುಂದುವರೆದು ಆಗ ನನ್ನ ವಕೀಲರಾಗಿದ್ದ ಶ್ರೀ. SKD ವಕೀಲರ ಹೇಳಿಕೆ ಮೇರೆಗೆ ಸಹಿ ಮಾಡಿದ್ದೆ ಎಂದು ಹೇಳುತ್ತಾರೆ. ಸದರಿ ಪ್ರಮಾಣ ಪತ್ರ ಮತ್ತು ಅರ್ಜಿಯನ್ನು ಒಟ್ಟಾಗಿ ನಿಡಿ-27 ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಮಾಡಿದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಆಗುವುದಿಲ್ಲ. ಕಳೆದ 6-7 ವರ್ಷಗಳಿಂದ ಶ್ರೀ SKD ವಕೀಲರು ಗೊತ್ತು. ಅಂದಿನಿಂದ ಅವರ ಮೇಲೆ ನನಗೆ ವಿಶ್ವಾಸ ಇದೆ. ಅಸಲು ದಾವಾ ನಂಬರ 17/2015 ರಲ್ಲಿ ರಾಜಿ ಡಿಕ್ರಿ ಆಗುವ ಮುಂಚೆ ನಿಡಿ-27 ಕ್ಕೆ ಸಹಿ ಮಾಡಿದೇನೆ. ಎಷ್ಟು ದಿನದ ಮುಂಚೆ ಸಹಿ ಮಾಡಿದ್ದೆ ನೆನಪಿಲ್ಲ. ನಿಡಿ-27 ಕ್ಕೆ ಸೇಡಂನಲ್ಲಿ ಸಹಿ ಮಾಡಿದ್ದೇನೆ. ಸಾಕ್ಷಿಗೆ ಅಸಲು ದಾವಾ ನಂ. 123/2004 ರಲ್ಲಿ ಸಲ್ಲಿಸಿದ್ದ ಪ್ರಮಾಣ ಪತ್ರ

ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಡಿ-28 ಎಂದು ಗುರುತಿಸಲಾಯಿತು. ಸಾಕ್ಷಿಗೆ ಅಸಲು ದಾವಾ ನಂಬರ 122/2004 ರಲ್ಲಿನ ಪ್ರಮಾಣ ಪತ್ರ ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಡಿ-29 ಎಂದು ಗುರುತಿಸಲಾಯಿತು. ಸಾಕ್ಷಿಗೆ ಅಸಲು ದಾವಾ ನಂಬರ 122/2004 ರಲ್ಲಿನ ಪ್ರತಿವಾದ ಪತ್ರದ ದೃಢಿಕಎತ ನಕಲನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಡಿ-30 ಎಂದು ಗುರುತಿಸಲಾಯಿತು.

ಸೇಡಂ ಭೂನ್ಯಾಯ ಮಂಡಳಿ ಮುಂದೆ ಸಲ್ಲಿಸಿದ್ದ Declaration ನಲ್ಲಿ ಯಕಮ್ಮೈ ಗ್ರಾಮದ 135 ಎಕರೆ ತೋರಿಸಿಲ್ಲ ಎಂದರೆ ಸರಿ. ಮುಧೋಳ ಗ್ರಾಮದ 257 ಎಕರೆ ಜಮೀನನ್ನು ಭೂನ್ಯಾಯಾ ಮಂಡಳಿ ತಾಂಡೂರ ಮುಂದೆ ಸಲ್ಲಿಸಿದ್ದ Declaration ನಲ್ಲಿ ತೋರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು PUC ವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ ನನಗೆ ಈಗ 58 ವರ್ಷ ವಯಸ್ಸು. ನನ್ನ ಜನ್ಮ ದಿನಾಂಕ ಹೇಳಲು ಆಗುವುದಿಲ್ಲ. ಯಾವ ವರ್ಷದಿಂದ ವಿಭಾಗದಂತೆ 5 ಜನರ ಹೆಸರಿಗೆ ಪಹಣಿಗಳು ಬಂದವು ಹೇಳಲು ಆಗುವುದಿಲ್ಲ. ನಾನು ಮತ್ತು ನನ್ನ ಸಹೋದರರು ಇವತ್ತಿಗೂ ಹಿಂದೆ ಆಗಿದ್ದ ವಿಭಾಗದ ಪ್ರಕಾರ ಬೇರೆ ಬೇರೆ ಇದ್ದೆವೆ ಎಂದರೆ ಸರಿ. ನಾನು 2009 ರವರೆಗೆ ಮುಧೋಳದಲ್ಲಿರುವ ನನ್ನ ಸೋದರ ಮಾವನ ಮನೆಯಲ್ಲಿದ್ದೆ.

ಅಸಲು ದಾವಾ ನಂಬರ 17/2015 ರಲ್ಲಿ ಯಾವ ಯಾವ ಜಮೀನುಗಳಿಗೆ ರಾಜಿ ಮಾಡಿಕೊಂಡಿದ್ದಾರೆ ಎಂದು ನಾನು ನೋಡಿಲ್ಲ. ಸಾಕ್ಷಿಗೆ 28-06-2015 ರ ಪಾಲು ಪಟ್ಟಿಯ ದೃಢಿಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಡಿ-31 ಎಂದು ಗುರುತಿಸಲಾಯಿತು. ಈ ದಾವೆಯಲ್ಲಿ ಅಸಲು ದಾವಾ ನಂಬರ 17/2015 ಮತ್ತು Misc No. 8/2018 ರ ಬಗ್ಗೆ ಹೇಳಿ ಬರೆಸಿಲ್ಲ. ಸರ್ವೆ ನಂಬರ 272 ರ ಜಮೀನು ಇವತಿಗೂ ಸುದರ್ಶನ ರೆಡ್ಡಿ ಹೆಸರಿಗೆ ಬರುತ್ತಿದೆ. ಅದೇ ರೀತಿ ಸರ್ವೆ ನಂಬರ 3 ರ ಜಮೀನು ಜಗನಮೋಹನ ರೆಡ್ಡಿ ಹೆಸರಿಗೆ ಬರುತ್ತಿದೆ. ಸರ್ವೆ ನಂಬರ 407 ರ ಜಮೀನು ನನ್ನ ಹೆಸರಿಗೆ ಬರುತಿದೆ. ಇವತಿಗೂ ನನ್ನ ಹೆಸರಿಗೆ ಬರುತ್ತಿದೆ. ನನ್ನ ಸೋದರ ಮಾವ ವೆಂಕಟರಾಮರೆಡ್ಡಿಗೆ ಒಬ್ಬ ಸಹೋದರ ಇದ್ದಾರೆ. ಲಿಂಗಾರೆಡ್ಡಿ ವೆಂಕಟರಾಮರೆಡ್ಡಿಯ ತಮ್ಮ ಎಂದರೆ ಸರಿ. ಅವರಿಬ್ಬರ ನಡುವೆ ಭಾಗ ಆಗಿತ್ತು ಇಲ್ಲ ನನಗೆ ಗೊತ್ತಿಲ್ಲ. ಲಿಂಗಾರೆಡ್ಡಿ ರವರನ್ನು ನಾನು ನೋಡಿಲ್ಲ. ಅವರ

ಹೆಸರಿನಲ್ಲಿದ್ದ ಜಮೀನು ಪಹಣಿಗಳನ್ನು ನಾನು ನೋಡಿಲ್ಲ. ಅವರಿಬ್ಬರು ಬದುಕಿದ್ದಾಗ ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
**ಸೇಡಂ.**